(ಈ) ಯಾವ ಯಾವ ಸಾರಿಗೆ ಸಂಸ್ಥೆಗಳು ಎಷ್ಟೆಷ್ಟು ಆಕ್ಟ್ರಾಯಿ ತೆರಿಗೆಯನ್ನು ನೀಡದೆ ಬಾಕಿ ಉಳಿಸಿಕೊಂಡಿದ್ದಾರೆ?

ಶ್ರೀ ಎಚ್.ಸಿ. ಶ್ರೀಕಂಠಯ್ಯ (ನಗರಾಡಳಿತ ಮಂತ್ರಿಗಳು)—

(ಅ) ಮೂರು ವರ್ಷಗಳಲ್ಲಿ ಬಂದ ಆದಾಯವನ್ನು ಈ ಕೆಳಗೆ ನಮೂದಿಸಲಾಗಿದೆ.

(1)	1975-76	7,19,32,418-11
(2)	1976-77	8,36,24,977-80
(3)	1977-78	9,43,44,778-03

(ಆ) ಆಕ್ಟ್ರಾಯಿ ತೆರಿಗೆಯನ್ನು ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾನೂನು ೧೯೭೬ ಪ್ರಕರಣ ೪೦ ನೇ ವಿಧಿ ಬೈಲಾ ನಂ. ೪೫ರ ಪ್ರಕಾರ ವಸೂಲಿ ಮಾಡಲಾಗುತ್ತಿದೆ.

(ಇ) ೯೯ ಸಾರಿಗೆ ಸಂಸ್ಥೆಗಳಿಗೆ ನಿಯಮ ೧೦ ಬೈಲಾ ನಂ. ೪೫ರ ಪ್ರಕಾರ ಲಿಖಿತ ಒಪ್ಪಂದದ ಮೇರೆಗೆ ಈ ಕೆಳಕಂಡ ಸೌಲಭ್ಯಗಳನ್ನು ಕೊಡಲಾಗುತ್ತಿದೆ.

(೧) ಈ ಸೌಲಭ್ಯ ೧೯೭೪ನೇ ಸಂವತ್ಸರದಿಂದ ಜಾರಿಗೆ ಬಂದು ಸಾವಿರ ನಗದು ಹಣ ತೇವಣಿಯನ್ನು ಮತ್ತು ಲಿಖಿತ ಒಪ್ಪಂದವನ್ನು ತೆಗೆದುಕೊಳ್ಳಲಾಗಿದೆ. ಸಾರಿಗೆ ಸಂಸ್ಥೆಗಳ ತೇವಣಿಯಾಗಿ ಕೊಡುತ್ತಿದ್ದ ಒಂದು ಸಾವಿರ ರೂಪಾಯಿಗಳನ್ನು ೧೯೭೬ ರಿಂದ ೫೦೦೦ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ.

(೨) ಈ ಒಪ್ಪಂದದ ಪ್ರಕಾರ ಪ್ರತಿ ಸಾರಿಗೆ ಸಂಸ್ಥೆ ತಮ್ಮ ವಾಹನಗಳಲ್ಲಿ ಬರತಕ್ಕ ಸುಂಕದ ಸರಕುಗಳನ್ನು (ಸಾಮಾನುಗಳನ್ನು) ಟ್ರಾನ್ಸಿಟ್ ಮೆಮೋ ತೆಗೆದುಕೊಂಡು ನೇರವಾಗಿ ತಮ್ಮ ಮಳಿಗೆಗಳಿಗೆ ಹೋಗತಕ್ಕ ಸೌಲಭ್ಯವನ್ನು ಕೊಡಲಾಗಿದೆ.

(೩) ಈ ತರಹ ತೆಗೆದುಕೊಂಡು ಹೋದ ಸಾರಿಗೆ ಸಂಸ್ಥೆಗಳನ್ನು ಸುಂಕವನ್ನು ೩೦ ದಿನಗಳೊಳಗೆ ಉಗ್ರಾಣದ ತೆರಿಗೆ ಇಲ್ಲದೆ ಕೊಡಲು ಅವಕಾಶ ಕಲ್ಪಿಸಲಾಗಿದೆ ೩೦ ದಿನಗಳೊಳಗೆ ಸುಂಕ ಪಾವತಿ ಮಾಡದೇ ಇದ್ದರೆ ಅಂತ ಸರಕುಗಳನ್ನು ಕಾರ್ಪೊರೇಷನ್ ಉಗ್ರಾಣಕ್ಕೆ ತಂದು ಹಾಕಬೇಕೆಂದು ಈ ಸೌಲಭ್ಯವನ್ನು ಪಡೆಯುತ್ತಿರುವ ಸಾರಿಗೆ ಸಂಸ್ಥೆಗಳ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ.

(ಈ) ಉತ್ತರವನ್ನು ಇದಕ್ಕೆ ಲಗತ್ತಿಸಿರುವ ಪಟ್ಟಿಯಲ್ಲಿ ಕೊಡಲಾಗಿದೆ.

ಬೆಂಗಳೂರು ನಗರ ಕಾರ್ಪೊರೇರೇಷನ್ ಕಾಮಗಾರಿಕೆಗಳಿಗಾಗಿ ಖರ್ಚುಮಾಡಿದ ಹಣ

ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ)—

೫೫ (೧೨) ನಗರಾಡಳಿತ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಬೆಂಗಳೂರು ನಗರ ಕಾರ್ಪೊರೇಶನ್ ೧೯೭೭ ಮತ್ತು ೧೯೭೮ರಲ್ಲಿ ಕಾಮಗಾರಿ ಕೆಲಸಗಳಿಗಾಗಿ ಖರ್ಚು ಮಾಡಿದ ಮೊತ್ತವೆಷ್ಟು;

(ಆ) ಈ ರೀತಿ ಖರ್ಚು ಮಾಡಿದ ಹಣವನ್ನು ಯಾವ ಬಾಬ್ತಿಗಾಗಿ ಎಷ್ಟೆಷ್ಟು ಹಣ ನೀಡಲಾಗಿದೆ.

(ಇ) ಕೆಲವು ಸಂದರ್ಭದಲ್ಲಿ ಕೆಲಸ ಮಾಡದೆ ಬಿಲ್ ಮಾಡಿ ಹಣ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್.ಸಿ. ಶ್ರೀಕಂಠಯ್ಯ ನಗರಾಡಳಿತ ಮಂತ್ರಿಗಳು.—

(ಅ) ೬,೪೭,೧೧,೪೧೪—೭೬ ರೂಪಾಯಿಗಳು.

(ಆ) ವಿವಿಧ ಬಾಬ್ತುಗಳಿಗೆ ಕಾಮಗಾರಿ ಕೆಲಸಕ್ಕಾಗಿ ವಿನಿಯೋಗಿಸಿದ ಹಣದ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ.

(ಇ) ಅಂತಹ ಸಂದರ್ಭಗಳು ಯಾವುದೂ ಗಮನಕ್ಕೆ ಬಂದಿಲ್ಲ.